REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009
ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 35 ಸೆಪ್ಟೆಂಬರ್ 2022 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 9



ಅಧ್ಯಕ್ಷರ ನುಡಿ

## ಜನನಾಯಕ–ಜನಮೆಚ್ಚಿನ ನಾಯಕನ–ಜನಾನುರಾಗಿ ಸೇವೆಗೆ ಜೀವಮಾನ ಸಾಧನ ಪ್ರಶಸ್ತಿ




ಕರ್ನಾಟಕ ಆರ್ಯವೈಶ್ಯ ಮಹಾಸಭೆಯ 4ನೇ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಆರ್ಯವೈಶ್ಯ ಸಮಾಜದ ಭೀಷ್ಮರಾಗಿ ಸಮಾಜದ ಪ್ರತಿಯೊಂದು ಕಾರ್ಯಕ್ರಮದ ಶಕ್ತಿಯಾಗಿರುವ ಶ್ರೀ ಡಿ ಹೆಚ್ ಶಂಕರಮೂರ್ತಿರವರಿಗೆ ದಿನಾಂಕ: 4–9–2022 ರಂದು ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಿದ ಅಮೃತಘಳಿಗೆ.

ಸೆಪ್ಟಂಬರ್ 2, ನನ್ನ ಹುಟ್ಟು ಹಬ್ಬದ ದಿನ, ಅಂದು ರಾಜ್ಯಾದ್ಯಂತ ಇರುವ ಸಹಸ್ರಾರು ನಮ್ಮ ಸ್ನೇಹಿತರು, ಕುಲಭಾಂದವರು ಅತ್ಯಂತ ಪ್ರೀತಿ, ಅಭಿಮಾನಗಳಿಂದ ಶುಭಕೋರಿ, ಹರಸಿ ಹಾರೈಸಿ ಚೈತನ್ಯ ತುಂಬಿದ್ದಾರೆ. ಹಾರೈಸಿದ ಪ್ರತಿಯೊಬ್ಬರಿಗೂ ನನ್ನ ಹೃದಯ ಪೂರ್ವಕ ಧನ್ಯವಾದಗಳನ್ನು ಅರ್ಪಿಸಿ ಇದೇ ಪ್ರೀತಿ, ವಿಶ್ವಾಸ ಸದಾಕಾಲ ನನ್ನೊಂದಿಗೆ ಇರಲೆಂದು ಆಶಿಸುತೇನೆ.

ಈ ಜಗತ್ತಿನಲ್ಲಿ ಸೋಲದೆ ಗೆದ್ದವರು ಯಾರೂ ಇಲ್ಲ. ಸೋತು ಗೆದ್ದವರೇ ಸಾಧಕರೆಲ್ಲಾ ಎಂಬುದಕ್ಕೆ ಸ್ಪಷ್ಟವಾದ, ನೈಜವಾದ ಸಾಕ್ಷಿಯಾದದ್ದು 04/09/2022 ರಂದು **ನಡೆದ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ಪ್ರಧಾನ ಸಮಾರಂಭ.** ತಾವುಗಳೇ ಆಯ್ದು ಕೊಂಡ ಕ್ಷೇತ್ರಗಳಲ್ಲಿ ಇಂದು ಸಾಧಕರಾಗಿ ವೇದಿಕೆಯಲ್ಲಿ ವಿರಾಜಮಾನರಾದವರು ಸಹ ಸಾಧನೆಯ ಹಾದಿಯಲ್ಲಿ ಏಳು ಬೀಳುಗಳನ್ನು ಕಂಡವರೇ. ಆತ್ಮಬಲ ಇರುವವರು ನಿಜವಾದ ಶಕ್ತಿವಂತರು. ಆತ್ಮ ವಿಶ್ವಾಸ ಒಂದು ಮಹಾ ಆಯುಧ. ಅದು ಎಲ್ಲಾ ಸಂದರ್ಭದಲ್ಲಿ ಜಯ ತಂದು ಕೊಡದೆ ಇರಬಹುದು. ಆದರೆ ಯಾವುದೇ ಪರಿಸ್ಥಿತಿಯನ್ನು ಸವಾಲನ್ನು ಎದುರಿಸಿ ಸಾಧಿಸುವ ಬಲವನ್ನು ತಂದುಕೊಡುತ್ತದೆ. ಈ ಜೀವನ, ನಮ್ಮನ್ನು ನಾವು ಕಂಡು ಕೊಳ್ಳುವುದಲ್ಲ, ನಮ್ಮನ್ನು ನಾವು ಸೃಷ್ಟಿಸಿ ಕೊಳ್ಳುವುದು. ತಿರಸ್ಕಾರ, ಬಹಿಷ್ಕಾರ, ಪುರಸ್ಕಾರ ಇವು ಮನುಷ್ಯನ ಬದುಕನ್ನು ಬದಲಿಸುವ ಚಮತ್ಕಾರಿ ಅಂಶಗಳು. ಆಯಾ ಕಾಲ ಘಟ್ಟದ ಪರಿಸ್ಥಿತಿಗಳನ್ನು ನಿಭಾಯಿಸಿ, ಯಶಸ್ಸು ಗಳಿಸಿದ ವಿಶೇಷವಾದ ವ್ಯಕ್ತಿತ್ವವನ್ನುಳ್ಳ 14 ಜನ ವಿವಿಧ ಕ್ಷೇತ್ರದ ಸಾಧಕರನ್ನು ಸಮಾಜಕ್ಕೆ ಅರ್ಥಪೂರ್ಣವಾಗಿ ಪರಿಚಯಿಸಿದ ಹೆಮ್ಮೆ ಮಹಾಸಭೆಗಿದೆ. ಇಂತಹ ಸಾವಿರಾರು ಸಾಧಕರು ನಾಡಿನಲ್ಲಿ ಹುಟ್ಟಿ ಬಂದು ಆರ್ಯವೈಶ್ಯ ಸಮಾಜದ ಗೌರವವನ್ನು ಹೆಚ್ಚಿಸಲಿ, ವಿಶ್ವದಲ್ಲಿ ಭಾರತ ದೇಶದ ಹಿರಿಮೆ ಗರಿಮೆಗಳನ್ನು ಮುಗಿಲೆತ್ತಕ್ಕೇರಿಸಲೆಂದು ಆಶಿಸುತ್ತೇನೆ.

**ಚುಚ್ಚುವುದು ಸೂಜಿಯ ಗುಣವಾದರೂ ದಾರದ ಗೆಳೆತನ ಮಾಡಿದ ಮೇಲೆ ಸೂಜಿಯ ಗುಣ ಬದಲಾಗಿ ತನ್ನ ಸನಿಹಕ್ಕೆ ಬಂದ ಎಲ್ಲವನ್ನು ಜೋಡಿಸಲು ಮುಂದಾಗುತ್ತದಲ್ಲವೇ.** ನಾವು ಹೇಗಿದ್ದೆವು ಅನ್ನೋದಿಕ್ಕಿಂತಲೂ, ನಾವು ಏನಾಗಬೇಕು ಎಂದು ತೀರ್ಮಾನಿಸಿ ಅದರಂತೆ ಅಂತಹ ವ್ಯಕ್ತಿಗಳ ಸಂಭಂದ ಬೆಳೆಸಿ ಕೊಂಡು, ಅಂತಹ ವ್ಯಕ್ತಿಗಳೊಂದಿಗೆ ಮಾರ್ಗದರ್ಶನ ಪಡೆದುಕೊಂಡು ನಮ್ಮ ದಾರಿಯನ್ನು ನಾವೇ ಸೃಷ್ಟಿಸಿ ಕೊಂಡಲ್ಲಿ ನಮ್ಮ ಹಾದಿ ರಾಜ ಮಾರ್ಗವಾಗುತ್ತದೆ, ನಮ್ಮ ಗುರಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಮುಂದೊಂದು ದಿನ ನಾವೇ ಇತರರಿಗೆ ದಾರಿ ದೀಪವೂ, ಆದರ್ಶವೂ ಆಗುತ್ತೇವೆ. ದುರಂತವೆಂದರೇ ಹಲವರು ತಾವು ಬೆಳೆಯುವುದಕ್ಕಿಂತಲೂ ಮತ್ತೊಬ್ಬರನ್ನು ತುಳಿಯಲು ತಮ್ಮ ಸಮಯ ವ್ಯರ್ಥ ಮಾಡುತ್ತಾ ಜೀವನದಲ್ಲಿ ಹೀರೋಗಳು ಆಗುವ ಬದಲಿಗೆ ವಿಲನ್‌ಗಳು ಆಗುತ್ತಿರುವುದು ವಿಪರ್ಯಾಸ. ಚೇತೋಹಾರಿ ಸಮಾಜ ನಿರ್ಮಾಣಕ್ಕೆ ಇಂತಹ ವ್ಯಕ್ತಿಗಳಿಂದ ಅಡ್ಡಿ ಆತಂಕಗಳೇ ಹೆಚ್ಚು. ದ್ವೇಷ ಸಾಧಿಸಿ ಕೊಂಡು ಹೋಗೋಕೆ ಇಲ್ಲಿ ಯಾರೂ ನಮ್ಮವರಲ್ಲ, ಯಾರೂ ಶಾಶ್ವತವೂ ಅಲ್ಲ, ಇರುವಷ್ಟು ಕಾಲ ನಾವು ಒಬ್ಬರಿಗೆ ಆಸರೆಯಂತಿದ್ದರೆ ಸಾಕು ಜೀವನಕ್ಕೆ ಅರ್ಥ ಬರುತ್ತದೆ. ಈ ದಿಸೆಯಲ್ಲಿ ಸಂಘ ಸಂಸ್ಥೆಗಳು ವಿಶೇಷವಾಗಿ ಕಾರ್ಯ ನಿರ್ವಹಿಸಿ ಭವಿಷ್ಯದ ಪೀಳಿಗೆಗೆ ಆದರ್ಶಗಳನ್ನು ರೂಢಿಸಿ ಕೊಳ್ಳುವ ಕಲೆಯ ಬಗ್ಗೆ ಸೂಕ್ತವಾದ ಮಾರ್ಗದರ್ಶನಗಳ್ನು ನೀಡುತ್ತಾ ಸಮಾಜವನ್ನು ತಿದ್ದುವ ನಿಷ್ಠಾವಂತ ಪ್ರಯತ್ನಗಳನ್ನು ಮಾಡಿದ್ದೇ, ಆದರೆ ನಮಗೇ ನಾವೇ ಸಾಟಿಯಾಗುತ್ತೇವೆ. ಪ್ರತೀ ವರ್ಷವೂ ಕನಿಷ್ಠ ಒಂದೇ ಒಂದು ಕಾರ್ಯಕ್ರಮವನ್ನಾದರೂ ಈ ನಿಟ್ಟಿನಲ್ಲಿ ಸಂಘಗಳು ನಡೆಸುವಂತಾಗಲೆಂದು ಆಶಿಸುತ್ತೇನೆ.

ಬಂದುಗಳೇ, ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕ. ಒಂದೊಂದು ಹಬ್ಬವೂ ತನ್ನದೇ ಆದ ವೈಶಿಷ್ಟ್ಯತೆ ಹಾಗೂ ಪ್ರಾಮುಖ್ಯತೆ ಹೊಂದಿದೆ. ಶುಭಕೃತು ನಾಮ ಸಂವತ್ಸರದ ನಾಡ ಹಬ್ಬ ದಸರಾ ಬಂದೇ ಬಿಟ್ಟಿತು. ಮನೆಯ ಹಿರಿಯರು ಹಬ್ಬಗಳ ವೈಶಿಷ್ಟ್ಯತೆ ಆಚರಣೆ ಬಗ್ಗೆ ತಿಳಿದು ಕೊಂಡು ನಾಡಹಬ್ಬ ದಸರಾವನ್ನು ಮನೆ ಮಂದಿಯೊಂದಿಗೆ ಸಂಭ್ರಮದಿಂದ ಆಚರಿಸಿ. ನಮ್ಮ ಹಿರಿಯರು ಹಾಕಿ ಕೊಟ್ಟಿರುವ ಧಾರ್ಮಿಕ ಸಂಪ್ರದಾಯಗಳನ್ನು ಗೌರವಿಸಿ, ಹಬ್ಬಗಳ ಆಚರಣೆ ಎಂದರೇ ಕೇವಲ ವಿಶೇಷವಾದ ಅಡುಗೆಯಲ್ಲ, ಅದು ನಮ್ಮ ಸಂಸ್ಕಾರವನ್ನು ಬಿಂಬಿಸುವ, ನಮ್ಮ ಧರ್ಮವನ್ನು ವಿಜೃಂಭಿಸುವ ಶಕ್ತಿ. ಶಕ್ತಿಯೇ ನಮ್ಮೆಲ್ಲಾ ಸಾಧನೆಗಳಿಗೆ ಅಡಿಪಾಯ. ಧರ್ಮ ಶಿಕ್ಷಣ, ಮೌಲ್ಯಾಧಾರಿತ ಶಿಕ್ಷಣವನ್ನು ಭೋದಿಸುವ ಶಕ್ತಿ ಕೇಂದ್ರಗಳು ನಮ್ಮ ದೇವಾಲಯಗಳು ಆಗಬೇಕು, ನವರಾತ್ರಿಯ ಪೂರ್ಣ ನಾವು ನಮಗೆ ಹತ್ತಿರವಿರುವ/ಇಷ್ಟವಿರುವ ಮಂದಿರಗಳಿಗೆ ಭೇಟಿ ನೀಡಿ ನಮ್ಮ ಭಕ್ತಿ ಹಾಗೂ ಸೇವೆಯನ್ನು ನಿಷ್ಠೆಯಿಂದ ಸಮರ್ಪಣೆ ಮಾಡಬೇಕು. ಇಂತಹ ಆಚರಣೆಗಳಿಂದ ನಮ್ಮ ಮಕ್ಕಳಲ್ಲಿ ಸಮರ್ಪಣಾ ಭಾವ ಬೆಳೆಯುತ್ತದೆ, ಅರಳುತ್ತದೆ, ಅವರು ಸಮಾಜಮುಖಿಯಾಗಿ ಬೆಳೆಯಲು ಸಹಕಾರಿಯಾಗುತ್ತದೆ, ಇಂತಹ ಸಮಾಜಮುಖಿ ಮಕ್ಕಳಿಂದ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಬನ್ನಿ ನಾಡಹಬ್ಬ ದಸರಾ ಆಚರಣೆ ನಮ್ಮ ಮನೆಗಳಲ್ಲಿ ಮನಗಳಲ್ಲಿ ಸಂಭ್ರಮಿಸಿ. ಪ್ರಕೃತಿ ಸಮೃದ್ದವಾಗಿ ದೇಶದ ಜನತೆ ಸುಖ ಶಾಂತಿ ಸಮೃದ್ಧಿಗಳಿಂದ ಬೆಳಗುವಂತಾಗಲೆಂದು ಪ್ರಾರ್ಥಿಸೋಣ. **ತಮಗೆಲ್ಲರಿಗೂ ದಸರಾ ಹಬ್ಬದ ಶುಭಾಷಯಗಳು.**



**ಆರ್ ಪಿ ರವಿಶಂಕರ್**
**ಅಧ್ಯಕ್ಷರು**

## ನಾಲ್ಕನೇ ಆವೃತ್ತಿ ವಾಸವಿ ಅವಾರ್ಡ್ಸ್ ಆಫ್ ಎಕ್ಸಲೆನ್ಸ್ 2022



# ಆರ್ಯವೈಶ್ಯ ಸಮಾಜದ ಸಾಧಕ ಸರದಾರರು



ನಾಲ್ಕನೇ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿರವರಿಂದ ಉದ್ಘಾಟನೆ

ಅಳುತ್ತಾ ಜಗತ್ತಿಗೆ ಬಂದ ನಾವು, ನಮ್ಮ ಸಾವಿಗೆ ಜಗತ್ತೇ ಅಳುವಂತಹ ಸಾಧನೆ ಮಾಡಬೇಕು. ಆಗ ಮಾತ್ರ ನಮ್ಮ ಜೀವನ ಸಾರ್ಥಕ. ನಮ್ಮ ಬದುಕಿನಲ್ಲಿ ಹೆಜ್ಜೆ ಗುರುತನ್ನು ಉಳಿಸಿ ಹೋಗುವುದು ಎಂದರೇ ನಡಿಗೆಯಿಂದಲ್ಲ, ನಡತೆಯಿಂದ. ಸಾಧನೆ ಎಂಬುದು ಒಂದು ದಿನದ ಪ್ರಯತ್ನವಲ್ಲ, ನಿರಂತರ ಪ್ರಯತ್ನಗಳು ಹಾಗೂ ಶ್ರಮದಿಂದ ಜೀವನದಲ್ಲಿ ಗಳಿಸಿದ ಶ್ರೇಷ್ಟತೆ. ಅತಂಹ ಪರಿಶ್ರಮ ಸಾಧಕರನ್ನು ಹುಡುಕಿ ತೆಗೆದು, ಅವರ ಸಾಧನೆಗಳನ್ನು ಸಮಾಜಕ್ಕೆ ಪರಿಚಯಿಸುವುದರಿಂದ ಯುವ ಪೀಳಿಗೆಗೆ ಸ್ಫೂರ್ತಿ. ಭವಿಷ್ಯದ ಪೀಳಿಗೆಗೆ ಆದರ್ಶ. ಸಮಾಜಕ್ಕೆ ಗೌರವ ದೇಶಕ್ಕೆ ಕೀರ್ತಿ ಅಲ್ಲವೇ? ಅಂತಹ ಒಂದು ಪವಿತ್ರ ಹಾಗೂ ನಿಷ್ಠಾವಂತ ಪ್ರಯತ್ನದ ಫಲವಾಗಿ ಮಹಾಸಭೆಯಲ್ಲಿ ಉದಿಸಿ ಬಂದ ಯೋಜನೆ ವಾಸವಿ ಎಕ್ಸಲೆನ್ಸ್ ಅವಾರ್ಡ್ ಕಾರ್ಯಕ್ರಮ.

ಕರ್ನಾಟಕ ರಾಜ್ಯದ ಪ್ರತಿಷ್ಠಿತ ವಿದ್ಯುನ್ಮಾನ ವಾಹಿನಿ ಏಷ್ಯಾನೆಟ್ ಸುವರ್ಣ ನ್ಯೂಸ್‌ಚಾನೆಲ್, ನಾಡಿನ ಪ್ರತಿಷ್ಠಿತ ದಿನಪತ್ರಿಕೆ ಕನ್ನಡಪ್ರಭ ಪತ್ರಿಕೆಯ ಸಹಯೋಗದೊಂದಿಗೆ 4ನೇ ಸೆಪ್ಟೆಂಬರ್ 2022ರ ಭಾನುವಾರ, ಬೆಂಗಳೂರು ನಗರದ ಅರಮನೆ ರಸ್ತೆಯಲ್ಲಿರುವ ಪ್ರತಿಷ್ಠಿತ ಜ್ಞಾನಜ್ಯೋತಿ ಸಭಾಂಗಣದಲ್ಲಿ ಸಾಧಕರಿಗೆ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ನೀಡುವ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಜ್ಯದ 25 ಜಿಲ್ಲೆಗಳಿಂದ ಆಗಮಿಸಿದ್ದ ಜನಸಾಗರದ ನಡುವೆ ಅತ್ಯಂತ ವೈಭವಯುತವಾಗಿ ನಡೆದ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವಾಸವಿ ಪೀಠಂನ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿರವರು ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಭೆಯನ್ನುದ್ದೇಶಿಸಿ ಮಾತನಾಡಿ, ಕೊರೋನಾ ಹಿನ್ನೆಲೆಯಲ್ಲಿ ಎರಡು ವರ್ಷದ ಬಳಿಕ ಪ್ರಶಸ್ತಿ ಪ್ರದಾನ ಮಾಡುವುದನ್ನು ಪುನರಾರಂಭಿಸಿರುವುದು ಸಂತಸದ ಸಂಗತಿಯಾಗಿದೆ. ಜೀವನದಲ್ಲಿ ಆದರ್ಶ ವ್ಯಕ್ತಿಗಳು ಮುಖ್ಯವಾಗುತ್ತಾರೆ. ಕ್ರೀಡೆ, ಉದ್ಯಮ, ಆಧ್ಯಾತ್ಮ, ಸಾಹಿತ್ಯ ಮತ್ತಿತರ ಕ್ಷೇತ್ರಗಳಲ್ಲಿ ಹಿಂದೆ ಆದರ್ಶ ವ್ಯಕ್ತಿಗಳು ಇರುತ್ತಿದ್ದರು. ಆದರೆ ಈಗ ಸಾಮಾಜಿಕ ಜಾಲತಾಣಗಳ ಪ್ರಭಾವಕ್ಕೆ ಒಳಗಾಗುತ್ತಿರುವುದು ಒಳ್ಳೆ ಬೆಳವಣಿಗೆಯಲ್ಲ ಎಂದು ಅಭಿಪ್ರಾಯಪಟ್ಟರು.

**ಶಂಕರಮೂರ್ತಿ ಸಾಧನೆ ಮಾದರಿ:** ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಮಾತನಾಡಿ, ಜಗತ್ತು ಯಾವಾಗಲೂ ಸ್ಪರ್ಧಾತ್ಮಕವಾಗಿದ್ದು, 21ನೇ ಶತಮಾನದಲ್ಲಂತೂ ಇದು ತೀವ್ರವಾಗಿದೆ. ಆದ್ದರಿಂದ ನಾವು ಸದಾ ಖಚಿತತೆ, ಪರಿಣತಿ ಮತ್ತು ಉಕ್ಕೃಷ್ಟತೆ ಸಾಧಿಸುವ ಗುರಿ ಇಟ್ಟುಕೊಂಡಿರಬೇಕು. ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಉತ್ಕೃಷ್ಟ ಸಾಧನೆ ಮಾಡಿರುವುದಕ್ಕೆ ನಾಯಕರಾದ ಡಿ.ಹೆಚ್.ಶಂಕರಮೂರ್ತಿ ಅವರು ಮಾದರಿಯಾಗಿದ್ದಾರೆ ಎಂದು ಪ್ರಶಂಸಿಸಿದರು.

ರಾಜ್ಯ ರಾಜಕಾರಣದಲ್ಲಿ ಶಂಕರಮೂರ್ತಿಯವರು 4 ದಶಕಗಳ ಕಾಲ ನಿಷ್ಠೆಯಿಂದದುಡಿದಿದ್ದಾರೆ. ಈ ವಿಷಯದಲ್ಲಿ ನಮ್ಮೆಲ್ಲರಿಗೂ ಆದರ್ಶ ಮತ್ತು ಮೌಲ್ಯಗಳಿಂದ ಕೂಡಿರುವ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಮನುಕುಲದಲ್ಲಿ ಸಾಧನೆಯನ್ನು ಮಾಡಿದವರು ಶಾಶ್ವತವಾಗಿ ಉಳಿಯುತ್ತಾರೆ. ಶಂಕರಮೂರ್ತಿಅವರ ಸೇವೆ ಸ್ಮರಿಸಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾಜ ಸೇವೆ, ಉದ್ಯಮಶೀಲತೆ, ರಾಜಕಾರಣ ಮತ್ತು ಸಮುದಾಯದ ಹಿತವನ್ನೂ ಬೆಳೆಸಿಕೊಂಡಿರುವ ಶಂಕರಮೂರ್ತಿಯವರು ತಮ್ಮ ಅನುಪಮ ಮತ್ತು ಸಮಾಜಮುಖಿ ವ್ಯಕ್ತಿತ್ವದಿಂದ ಚಿರಂತನವಾಗಿ ಉಳಿಯಲಿದ್ದಾರೆ. ಸಾರ್ವಜನಿಕ ಬದುಕಿಗೆ ಬರುವವರು ಇಂಥವರನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು. ಆರ್ಯವೈಶ್ಯ ಮಹಾಸಭಾ, ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಇಂತಹ ಸಾಧಕರನ್ನು ಗುರುತಿಸಿ ಗೌರವಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಬಣ್ಣಿಸಿದರು.

**ಆರ್ಯವೈಶ್ಯ ಸಮಾಜದ ಬಂಧುಗಳು ಸಾರ್ವಜನಿಕವಾಗಿ ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ವಾಸವಿ ಎಕ್ಸಲೆನ್ಸ್ 2022ರ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.**

### ಪ್ರಶಸ್ತಿ ಪುರಸ್ಕೃತರು:-

**ಡಾ|| ಡಿ ಹೆಚ್ ಶಂಕರಮೂರ್ತಿ, ಜೀವಮಾನ ಸಾಧನೆ ಪ್ರಶಸ್ತಿ**

ಶ್ರೀ ಪಿ ಗೋವಿಂದರಾಜ, ಕೃಷಿ ಕ್ಷೇತ್ರ । ಶ್ರೀ ಗಿರೀಶ್‌ರಾಮನಾಥಂ, ವಾಣಿಜ್ಯ ಕ್ಷೇತ್ರ

ಶ್ರೀ ಶ್ರೀಕಾಂತ್ ಎಸ್ ಎಸ್ ಕೈಗಾರಿಕೆ (ತಯಾರಿಕೆ) । ಶ್ರೀ ಸತೀಶ್ ಎಸ್, ಸೇವಾ ಉದ್ಯಮಿ


ಶ್ರೀ ಎ ವಿ ಎಸ್ ಮೂರ್ತಿ, ಶಿಕ್ಷಣ ಕ್ಷೇತ್ರ । ವಾಸವಿ ಕ್ರೆಡಿಟ್‌ಕೋ-ಆಪರೇಟಿವ್ ಸೊಸೈಟಿ, ಸಹಕಾರ ಕ್ಷೇತ್ರ

ಶ್ರೀ ಎಸ್ ಎ ನಾರಾಯಣ ಶೆಟ್ಟಿ, ವೃತ್ತಿಪರ ಕ್ಷೇತ್ರ । ಕುಂಟ್ನಾಳ್ ವಿಶಾಲ್ ಕುಮಾರ್, ಯುವ ಉದ್ಯಮಿ

ಶ್ರೀಮತಿ ವರಮಹಾಲಕ್ಷ್ಮಿ ಸಿ.ಟಿ, ಸಾಧಕ-ಮಹಿಳಾ ವಿಭಾಗ । ಶ್ರೀ ರಿಷಿಕೇಶ್, ಸಾಧಕ-ಪುರುಷ ವಿಭಾಗ

ಶ್ರೀ ಕೃಷ್ಣ ಶೆಟ್ಟಿ ಸಿ.ಎಸ್, ಕಲೆ । ಶ್ರೀ ರಾಜಕುಮಾರ ಕೆ, ಸಾಹಿತ್ಯ

ಶ್ರೀ ಪೋತನ್ನ ಶೆಟ್ಟಿ ಕೆ, ಸಮಾಜ ಸೇವೆ । ಕುಮಾರಿ ಸುಚಲ್ ಪಿ ಜೆ, ಸಾಧಕ ಮಕ್ಕಳ ವಿಭಾಗ



ವಾಸವಿ ಅವಾರ್ಡ್ಸ್ ಆಫ್ ಎಕ್ಸಲೆನ್ಸ್ 2022ರ ಪ್ರಶಸ್ತಿ ಪುರಸ್ಕೃತರೊಂದಿಗೆ ಮುಖ್ಯ ಆಹ್ವಾನಿತರು

## ಶ್ರೀ ಜಿ ಮಲ್ಲಿಕಾರ್ಜುನ ರಾವ್ – ಕಿವಿ ಮಾತು



ಶ್ರೀ ಜಿ ಎಂ ರಾವ್ ಚೇರ್ಮನ್, ಜಿಎಂಆರ್ ಗ್ರೂಪ್ಸ್

ಆರ್ಯವೈಶ್ಯ ಸಮಾಜಕ್ಕೆ ತನ್ನದೇ ಆದ ಇತಿಹಾಸವಿದೆ. ಪ್ರತಿಯೊಂದು ಧಾರ್ಮಿಕ ಕಾರ್ಯಕ್ರಮಗಳಿಗೂ ಕೊಡುಗೈ ಧಾನಿಗಳು ಆರ್ಯವೈಶ್ಯ ಸಮಾಜ. ಜಾಗತಿಕವಾಗಿ ಬದಲಾದ ಸನ್ನಿವೇಶಗಳಿಗೆ ತಕ್ಕಂತೆ ನಾವು ಹೊಂದಾಣಿಕೆಯಾಗದಿದ್ದರೆ, ಅಭಿವೃದ್ಧಿ ಅಸಾಧ್ಯ.ಇದಕ್ಕೆ ನಾನೇ ಒಂದು ಉದಾಹರಣೆ. ವಿಶಾಖಪಟ್ಟಣ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಜನಿಸಿ, ಬೆಳೆದು ಕೈಗಾರಿಕೊಧ್ಯಮವನ್ನು ಆರಂಭಿಸಿ ನಂತರ ಇನ್ನೂ ಬೆಳೆಯುವ ಹಂಬಲದಿಂದ ಬೆಂಗಳೂರು ನಗರಕ್ಕೆ ಬಂದು ನೆಲಸಿದೆ. ಇಲ್ಲಿ ನಿರೀಕ್ಷಿಸಿದಂತೆ ಯಶಸ್ಸನ್ನು ಸಾಧಿಸಲು ಸಾಧ್ಯವಾಯಿತು. ಮತ್ತಷ್ಟು ದೊಡ್ಡ ಕನಸುಗಳನ್ನೊತ್ತು ರಾಷ್ಟ್ರದ ರಾಜಧಾನಿ ದೆಹಲಿಗೆ ಸ್ಥಳಾಂತರಗೊಂಡು ಅಲ್ಲಿಯೂ ಹೆಚ್ಚಿನ ಸಾಧನೆ ಮಾಡಲು ಅವಕಾಶ ದೊರೆಯಿತು. ಇಂದು ಒಂಬತ್ತು ವಿಮಾನ ನಿಲ್ದಾಣಗಳ ಹಾಗೂ ಸಾವಿರಾರು ಕಿಲೋಮೀಟರ್ ರಸ್ತೆಗಳ ನಿರ್ವಹಣೆ ಇತ್ಯಾದಿಗಳನ್ನು ದೇಶಕ್ಕೆ ಸಮರ್ಪಿಸಿ, ಲಕ್ಷಾಂತರ ಜನಗಳಿಗೆ ಉದ್ಯೋಗ ನೀಡಿದ ತೃಪ್ತಿ ನಮಗಿದೆ. ಎಲ್ಲರೂ ಸಂಘಟಿತರಾಗಿ ಆರ್ಯವೈಶ್ಯ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಬೇಕು. ಆತ್ಮ ವಿಶ್ವಾಸವೊಂದೇ ಸಾಧನೆಯ ರಾಜಮಾರ್ಗ. ನಾವು ಎಷ್ಟೇ ಬೆಳೆದರೂ ಎಷ್ಟೇ ಸಾಧಿಸಿದರೂ ಮಾನವಿಯ ಮೌಲ್ಯಗಳನ್ನು ಗೌರವಿಸಬೇಕು, ಆಗ ಮಾತ್ರವೇ ಸಾಧನೆಗೆ ಅರ್ಥ ಬರುತ್ತದೆ. ಗುಣಮಟ್ಟದ ಶಿಕ್ಷಣದಿಂದ ಮಾತ್ರವೇ ಅಭಿವೃದ್ಧಿ ಹಾಗೂ ಬದಲಾವಣೆ ಸಾಧ್ಯ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರೊಂದಿಗೆ ಆಧ್ಯಾತ್ಮಿಕತೆ ಹಾಗೂ ಯೋಗಕ್ಕೆ ಆಧ್ಯತೆ ನೀಡಿದರೆ ಒತ್ತಡಗಳಿಂದ ದೂರಾಗಿ ಸಾಧನೆ ಮಾಡಲು ಅವಶ್ಯವಿರುವ ಪ್ರೇರಣಾ ಶಕ್ತಿ ಅಂತರಂಗದಲ್ಲಿ ಅವಿರ್ಭವಿಸುತ್ತದೆ. ಮುಂದಿನ ಏಳೆಂಟು ವರ್ಷದಲ್ಲಿ ನಮ್ಮ ದೇಶ ವಿಶ್ವಕ್ಕೆ ಮಾದರಿಯಾಗಲಿದೆ. ಆರ್ಥಿಕವಾಗಿ ಬಲಿಷ್ಠವಾಗಲಿದೆ. ಇಂದಿನ ಯುವ ಜನತೆಯು ಭವಿಷ್ಯ ರೂಪಿಸಿಕೊಳ್ಳಲು ಸಾವಿರಾರು ಅವಕಾಶಗಳು ಕಣ್ಣಂದೆ ನಿಂತಿದೆ. ಉದ್ಯೋಗಿಗಳಾಗುವ ಬದಲು ಉದ್ಯೋಗದಾತರಾಗಿ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಶ್ರೀ ಹೆಚ್.ಪಿ.ಮಂಜುನಾಥ್‌ರವರು 15 ವರ್ಷದ ಹಿಂದೆ ನಮಗೆ ಗುರಿ ಇದ್ದರೂ ಗುರು ಇರಲಿಲ್ಲ. ಈಗ ಸಮರ್ಥ ಗುರುಗಳಿರುವುದು ಹೆಮ್ಮೆಯ ವಿಷಯವಾಗಿದೆ. ಆರ್ಯವೈಶ್ಯ ಸಮಾಜದ ಸೇವಾ ಕಾರ್ಯಗಳು ಬೇರೆ ಸಮಾಜಗಳಿಗೂ ಮಾದರಿಯಾಗಿವೆ. ಮಹಾಸಭೆಯು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯತ್ತ ದಾಪುಗಾಲಿಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ಸುವರ್ಣ ವಾಹಿನಿಯ ಸಂಪಾದಕರಾದ ಶ್ರೀ ಅಜಿತ್ ಹನುಮಕ್ಕನವರ್‌ರವರು ಮಾತನಾಡಿ ನಾನು ಸಾಮಾನ್ಯವಾಗಿ ಯಾವುದೇ ಒಂದು ನಿರ್ದಿಷ್ಟವಾದ ಸಮುದಾಯದ ಕಾರ್ಯಕ್ರಮಗಳಿಗೆ ಹೋಗುವುದಿಲ್ಲ, ಆದರೆ ಇಂದು ಆರ್ಯವೈಶ್ಯ ಸಮಾಜದ ಕಾರ್ಯಕ್ರಮಕ್ಕೆ ಆಗಮಿಸಿ ಮಹಾಸಭೆ ನಡೆಸುತ್ತಿರುವ ಕಾರ್ಯಚಟುವಟಿಕೆ ಗಮನಿಸಿದಾಗ ಹೃದಯ ತುಂಬಿ ಬಂದಿದೆ. ಸರ್ಕಾರಗಳು ನಡೆಸುವಂತಹ ಕಾರ್ಯಕ್ರಮಗಳನ್ನು ಒಂದು ಸಮಾಜ ನಡೆಸುತ್ತಿರುವುದು ಸ್ತುತ್ಯಾರ್ಹ. ಒಂದು ವೇಳೆ ಇಲ್ಲಿಗೆ ಬರದಿದ್ದರೆ ಬಹಳಷ್ಟು ವಿಚಾರಗಳು ಮರೆಯಾಗುತ್ತಿತ್ತು ಇಂತಹ ಒಂದು ಸಮಾರಂಭ ನನ್ನ ಕಣ್ತೆರಿಸಿದೆ ಬೇರೆಯವರಿಗೆ ಮಾದರಿಯಾಗಿದೆ ಎಂಬ ಮೆಚ್ಚುಗೆಯ ನುಡಿಗಳನ್ನು ನುಡಿದು ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆಗಳನ್ನು ತಿಳಿಸಿದರು.

ಶಾಸಕರಾದ ಶ್ರೀ ಡಿ.ಎಸ್.ಅರುಣ್‌ರವರು ವೇದಿಕೆಯಲ್ಲಿ ಸಕ್ರಿಯರಾಗಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು ಮಾರ್ಗದರ್ಶನ ನೀಡುತ್ತಿದ್ದುದು ಅವರ ಕ್ರಿಯಾಶೀಲತೆಗೆ ಹಿಡಿದ ಕೈಗನ್ನಡಿಯಾಗಿತ್ತು.
ರಾಜ್ಯದ ರಾಜಕೀಯ ಕ್ಷೇತ್ರ, ಸಾಮಾಜಿಕ ಕ್ಷೇತ್ರಗಳಲ್ಲಿ ಅಭೂತಪೂರ್ವ ಸೇವೆಯನ್ನು ಸಲ್ಲಿಸಿ, ಜಾತ್ಯಾತೀತವಾಗಿ, ಪಕ್ಷಾತೀತವಾಗಿ, ಜನಮನ್ನಣೆಯನ್ನು ಗಳಿಸಿ ಅಜಾತ ಶತ್ರುವಾಗಿ ತಮ್ಮ ಸರಳ ಸಜ್ಜನಿಕೆಯಿಂದ ಸರ್ವರ ಹೃದಯ ಸಿಂಹಾಸನದಲ್ಲಿ ಶಾಶ್ವತವಾಗಿ ನೆಲೆಸಿರುವ ಶ್ರೀ ಡಿ.ಹೆಚ್.ಶಂಕರ್‌ಮೂರ್ತಿರವರಿಗೆ ಜೀವಮಾನ ಸಾಧನ ಪ್ರಶಸ್ತಿ ನೀಡುವ ಮೂಲಕ ಮಹಾಸಭೆ ತನ್ನ ಗೌರವವನ್ನು ಹೆಚ್ಚಿಸಿಕೊಂಡಿತು.

ಕಾಲಾವಕಾಶದ ಕೊರತೆಯಿಂದ ಪ್ರಶಸ್ತಿ ಪ್ರಧಾನ ಮಾಡುವಾಗ ಪ್ರತಿಯೊಬ್ಬರ ಸಾಧನೆಗಳನ್ನು ತಿಳಿಸಿ ಪ್ರಶಸ್ತಿ ನೀಡುತ್ತಿದ್ದ ಪದ್ಧತಿಯನ್ನು ಸ್ವಲ್ಪ ಬದಲಾವಣೆಗಳೊಂದಿಗೆ ಮಾಡಬೇಕಾದ ಅನಿವಾರ್ಯವಾಯಿತು.ಈ ಒಂದು ಬದಲಾವಣೆಯಿಂದ ಯಾರಿಗಾದರೂ ಮನಸ್ಸಿಗೆ ಅಸಮಾಧಾನ ಉಂಟಾಗಿದ್ದಲ್ಲಿ ಮಹಾಸಭೆ ವಿಷಾದವನ್ನು ವ್ಯಕ್ತಪಡಿಸುತ್ತದೆ.

ಆರಂಭದಲ್ಲಿ ಶ್ರೀಮತಿ ಸಿರಿಶಾರವರ ಪ್ರಾರ್ಥನೆ ನಂತರ ಸ್ವಾಗತ ಹಾಗೂ ಕಾರ್ಯಕ್ರಮದ ಪರಿಚಯವನ್ನು ಮಹಾಸಭೆ ಅಧ್ಯಕ್ಷರಾದ ಶ್ರೀ ರಾ.ಪ.ರವಿಶಂಕರ್‌ರವರು ಅತ್ಯಂತ ಸೊಗಸಾಗಿ ಮಾಡಿಕೊಟ್ಟರು.
ತೆಲಂಗಾಣ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ, ಅಮರವಾಡಿ ಲಕ್ಷ್ಮೀನಾರಾಯಣ, ತಮಿಳುನಾಡು ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಒರಿಸ್ಸಾ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ ಜಿ.ವಿ.ರಾವ್‌ರವರನ್ನು ಅಭಿನಂದಿಸಲಾಯಿತು.
ದಾರಿ ಇತರರ ಕೇಳಿ ತಿಳಿಯಬಹುದು. ಆದರೆ ಗುರಿ ಮಾತ್ರ ನಮ್ಮದೇ ಆಗಿರಬೇಕು ಎನ್ನುವಂತೆ ಮಹಾಸಭೆ ಕಾರ್ಯನಿರ್ವಹಿಸಿ ಯಶಸ್ಸಿನ ಮೆಟ್ಟಿಲೇರುವ ಮೂಲಕ ನಾಲ್ಕನೇ ವರ್ಷದ ಪ್ರಶಸ್ತಿ ಪ್ರದಾನಕಾರ್ಯಕ್ರಮ ಸಂಪನ್ನಗೊಂಡಿತು.

# ರಾಜ್ಯಮಟ್ಟದ ಪ್ರತಿಭೋತ್ಸವ-2022

## ಈ ಬಾರಿ ಬೆಂಗಳೂರು ನಗರದಲ್ಲಿ

LAST DATE FOR APPLICATION 15.10.2022

## ಕರ್ನಾಟಕ ರಾಜ್ಯ ಆರ್ಯವೈಶ್ಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನ

**ಆತ್ಮೀಯ ಕುಲಬಾಂಧವರೇ,**

ಈ ವರ್ಷದ ಪರೀಕ್ಷೆಗಳಲ್ಲಿ ಎಸ್ ಎಸ್ ಎಲ್ ಸಿ , 2ನೇ ಪಿ ಯು ಸಿ, ಡಿಗ್ರಿ ಹಾಗು ಉನ್ನತ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಸಮಾಜದ ಕೀರ್ತಿಯನ್ನು ಬೆಳಗಿರುವ ಸಮಸ್ತ ವಿದ್ಯಾ ಮಾಣಿಕ್ಯಗಳನ್ನು ಕರ್ನಾಟಕ ರಾಜ್ಯದ ಸಮಸ್ತ ಆರ್ಯವೈಶ್ಯ ಬಂಧುಗಳ ಪರವಾಗಿ ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

ಶ್ರದ್ಧೆ, ಆತ್ಮ ವಿಶ್ವಾಸ, ಸತತ ಪರಿಶ್ರಮಗಳಿಂದ 2021–22 ನೇ ಶೈಕ್ಷಣಿಕ ಸಾಲಿನಲ್ಲಿ ನಡೆದ ಅಂತಿಮ ಪರೀಕ್ಷೆಗಳಲ್ಲಿ ಉತ್ತಮೋತ್ತಮ ಅಂಕಗಳನ್ನು ಪಡೆದ ವಿದ್ಯಾ ಮಾಣಿಕ್ಯಗಳನ್ನು ರಾಜ್ಯ ಮಟ್ಟದಲ್ಲಿ , ರಾಜ್ಯ ನಾಯಕರ, ರಾಜ್ಯದ ಸಮುದಾಯದವರ ಸಮ್ಮುಖದಲ್ಲಿ ಅಭೂತಪೂರ್ವವಾಗಿ ಅಭಿನಂದಿಸಲು ಮಹಾಸಭೆ ನಿರ್ಧರಿಸಿದೆ.

ಮಹಾಸಭೆ ವತಿಯಿಂದ ರಾಜ್ಯದ ನಾನಾ ಭಾಗಗಳಲ್ಲಿ ಅತ್ಯಂತ ಅಮೋಘವಾಗಿ ನಡೆದಿರುವ ಹಾಗೂ ಸಹಸ್ರಾರು ಕುಲಭಾಂದವರ ಮೆಚ್ಚುಗೆಗೆ ಪಾತ್ರವಾಗಿರುವ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ವೈಭವ ಪ್ರತಿಯೊಬ್ಬರ ನಿರೀಕ್ಷೆಗೆ ಮೀರಿದ್ದಾಗಿರುತ್ತದೆ.

ಅಂತಹ ಅವರ್ಣನೀಯ ವರ್ಣರಂಜಿತ 12ನೇ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮವನ್ನು ಬೆಂಗಳೂರು ನಗರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಾಧನೆ ಮೆರೆದ ವಿದ್ಯಾರ್ಥಿಗಳಿಗೆ ಜೀವನದಲ್ಲಿ ದೊರೆಯಬಹುದಾದ ಏಕೈಕ ಅಪೂರ್ವ ಅವಕಾಶ

### ಸೂಚನೆಗಳು

- 2021–22 ಶೈಕ್ಷಣಿಕ ವರ್ಷದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರತಿಭಾ ಪುರಸ್ಕಾರ ಅನ್ವಯವಾಗುತ್ತದೆ.
- S.S.L.C ಮತ್ತು PUC ಯಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಂಕ ಪಡೆದಿರುವವರು ಮತ್ತು ಅಂತಿಮ ಡಿಗ್ರಿ ಮತ್ತು ಇಂಜನಿಯರಿಂಗ್, ವೈದ್ಯಕೀಯ, ಸ್ನಾತಕೋತ್ತರ ಪದವಿ ಇತ್ಯಾದಿ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಪಡೆದವರು.
- ಯಾವುದೇ ವಿಶ್ವವಿದ್ಯಾನಿಲಯಗಳಿಂದ ಪಿ.ಹೆಚ್.ಡಿ ಪಡೆದವರು
- ಯಾವುದೇ ವಿಶ್ವವಿದ್ಯಾನಿಲಯಗಳಿಂದ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಯಾವುದೇ ಗೆಜೆಟೆಡ್ ಅಧಿಕಾರಿ ಅಥವಾ ಬ್ಯಾಂಕ್ ಮ್ಯಾನೇಜರ್ ಅಥವಾ ತಮ್ಮ ಶಾಲಾ /ಕಾಲೇಜು ಪ್ರಾಂಶುಪಾಲರಿಂದ ಸಹಿ ಮಾಡಿದ ಜೆರಾಕ್ಸ್ ಪ್ರತಿಗಳನ್ನು ONLINE ನಲ್ಲಿ ಕಳುಹಿಸಲು ಕೋರಿದೆ.
- ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ – 15.10.2022
- ಅರ್ಜಿಗಳನ್ನು ಪಡೆಯಲು www.kavms.com ಭೇಟಿ ಮಾಡಿ

## ಕರ್ನಾಟಕದ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ 2022–23ರ ಸಾಲಿನ ವಿಶೇಷ ಯೋಜನೆ

ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಆಶಾಕಿರಣ

## ಆರ್ಯವೈಶ್ಯ ವಿದ್ಯಾರ್ಥಿಮಿತ್ರ

LAST DATE FOR APPLICATION 30.10.2022

> ನೀವು ಪ್ರತಿಭಾವಂತ ವಿದ್ಯಾರ್ಥಿಗಳೇ? > ನಿಮಗೆ ವೃತ್ತಿಪರ ಕೋರ್ಸ್ ಮಾಡಲು ಆರ್ಥಿಕವಾಗಿ ಸಮಸ್ಯೆ ಇದೆಯೇ? > ಬ್ಯಾಂಕುಗಳಿಂದ ಶಿಕ್ಷಣ ಸಾಲ ಪಡೆಯಲು ಆಗಲಿಲ್ಲವೇ?

### ನಿಮ್ಮ ಶಿಕ್ಷಣ ಮುಂದುವರಿಸಲು ನಿಮಗೆ ಸಹಾಯ ನೀಡಲು ನಿಮ್ಮ ಜೊತೆಗಿದೆ–ನಿಮ್ಮ ಮಹಾಸಭೆ.

ಬಡತನದಲ್ಲಿ ಹುಟ್ಟುವುದು ನಮ್ಮ ತಪ್ಪಲ್ಲ–ಆದರೆ ಬಡತನದಲ್ಲಿಯೇ ಸಾಯುವುದು ಮಾತ್ರ ನಮ್ಮ ತಪ್ಪು, ಬಡತನ ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಶಾಪವಾಗಬಾರದು, ಪ್ರತಿಭೆಗಳು ಸೊರಗಲೂಬಾರದು. ಮನೆಯಲ್ಲಿ ಒಬ್ಬರು ವಿದ್ಯಾವಂತರಾದರೆ, ಅವರ ಮೂಲಕ ಕುಟುಂಬವೇ ಆರ್ಥಿಕವಾಗಿ ಸದೃಢವಾಗಬೇಕೆಂಬ ಉನ್ನತ ಧ್ಯೇಯೋದ್ದೇಶಗಳೊಂದಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಸಮಾಜದ ಆರ್ಥಿಕವಾಗಿ ತೊಂದರೆಯಲ್ಲಿರುವ ವೃತ್ತಿಪರ ಕೋರ್ಸುಗಳಲ್ಲಿ ಅಂದರೆ, ಇಂಜಿನಿಯರಿಂಗ್, ವೈದ್ಯಕೀಯ, ಕಾನೂನು ಕೋರ್ಸುಗಳಲ್ಲಿ ಈಗಾಗಲೇ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ಬಡ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಕೋರ್ಸ್ ಆರಂಭದಿಂದ ಕೊನೆಯವರೆವಿಗೂ ಕಾಲೇಜಿಗೆ ಪಾವತಿ ಮಾಡಬೇಕಿರುವ ಪೂರ್ಣ ಫೀ ಹಣವನ್ನು ಅಥವಾ ಗರಿಷ್ಠ 1,00,000–00(ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಡ್ಡಿ ರಹಿತ ಸಾಲದ ರೂಪದಲ್ಲಿ ಮಹಾಸಭೆಯ ಷರತ್ತುಗಳನ್ವಯ ಕೊಡಿಸಲಾಗುತ್ತದೆ.

### ಅರ್ಹತೆಗಳು

- ಫಲಾನುಭವಿ ವಿದ್ಯಾರ್ಥಿಗಳ ಪೋಷಕರು ಕಡ್ಡಾಯವಾಗಿ ಮಹಾಸಭೆಯ ಸದಸ್ಯರಾಗಿರಬೇಕು.
- ಯಾವುದೇ ಬೇರೆ ಸಂಘ/ಸಂಸ್ಥೆಗಳಿಂದ/ಬ್ಯಾಂಕುಗಳಿಂದ, ಯಾವುದೇ ರೀತಿಯ ವಂತಿಗೆ/ಸಾಲ ಪಡೆದುಕೊಂಡಿರಬಾರದು.
- ಸರ್ಕಾರದ ಕೋಟಾದಡಿ ಸೀಟು ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.
- ಪ್ರತೀ ಅರೆ/ವಾರ್ಷಿಕ ಪರೀಕ್ಷೆಗಳಲ್ಲಿ ಕನಿಷ್ಟ ಪ್ರಥಮ ದರ್ಜೆಯಲ್ಲಿ (FIRST CLASS) ಉತ್ತೀರ್ಣರಾಗಿರಬೇಕು. ತಪ್ಪಿದಲ್ಲಿ ಸೌಲಭ್ಯವನ್ನು ನಿಲ್ಲಿಸಲಾಗುತ್ತದೆ.
- ಕರ್ನಾಟಕ ರಾಜ್ಯದಲ್ಲಿಯೇ ಎರಡನೇ ಪಿ.ಯು.ಸಿ ವರೆವಿಗೂ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿದೆ.
- ಸಹಕಾರ ಸಂಘಗಳ ಮೂಲಕ ಬಡ್ಡಿರಹಿತ ಸಾಲ ಸೌಲಭ್ಯ ಮಾಡಿಕೊಡಲಾಗುತ್ತದೆ.
- ವಿದ್ಯಾರ್ಥಿಗಳ ಕೋರ್ಸು ಮುಗಿದ 6 ತಿಂಗಳ ನಂತರ ಗರಿಷ್ಠ 36 ತಿಂಗಳ ಒಳಗಾಗಿ ಸಾಲದ ಮೊತ್ತವನ್ನು ಕಂತುಗಳಲ್ಲಿ ಪೂರ್ಣವಾಗಿ ಪಾವತಿ ಮಾಡಬೇಕಾಗುತ್ತದೆ.
- ಸ್ಥಳೀಯ ಆರ್ಯವೈಶ್ಯ ಸಂಘಗಳ/ಮಹಾಸಭಾ ನಿರ್ದೇಶಕರ ಅನುಮತಿ ಪತ್ರ ಕಡ್ಡಾಯ.
- ಈ ಯೋಜನೆಯಲ್ಲಿ ಸಹಕಾರ ಕೋರಿ ಮಹಾಸಭೆಗೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿಗಳನ್ನು ಊರ್ಜಿತ/ಅನೂರ್ಜಿತಗೊಳಿಸುವ ಪೂರ್ಣ ಅಧಿಕಾರವು ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ಇರುತ್ತದೆ ಮತ್ತು ಯಾವುದೇ ಸಂದರ್ಭದಲ್ಲಿ ಮಹಾಸಭೆಯ ಯೋಜನೆಯನ್ನು ಹಿಂಪಡೆಯುವ ಅಧಿಕಾರವನ್ನು ಮಹಾಸಭೆ ಹೊಂದಿರುತ್ತದೆ.
- ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧಿಕೃತ ವೆಬ್‌ಸೈಟ್ www.kavms.com ಮೂಲಕ online ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 30–10–2022
- ಹೊರದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.
- ಯಾವುದೇ ವಿಶ್ವವಿದ್ಯಾನಿಲಯದಿಂದ ಅಂಗೀಕೃತ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
- ಒಂದು ಕುಟುಂಬದ ಇಬ್ಬರು ವಿದ್ಯಾರ್ಥಿಗಳು ಏಕಕಾಲದಲ್ಲಿ ಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ.
- ಯೋಜನೆಗೆ ಸಂಭಂದಿಸಿದ ನಿಯಮ/ನಿಬಂಧನೆಗಳನ್ನು ಆಗಿಂದ್ದಾಗ್ಗೆ ಪರಿಷ್ಕರಿಸುವ ಅಧಿಕಾರ ಮಹಾಸಭೆಗೆ ಇರುತ್ತದೆ.
- ಯಾವುದೇ ವಿದ್ಯಾರ್ಥಿಗಳು/ಪೋಷಕರು ತಪ್ಪು ಮಾಹಿತಿಗಳನ್ನು ನೀಡಿ ಈ ಯೋಜನೆಯಿಂದ ಸೌಲಭ್ಯ ಪಡೆದಿದ್ದಾರೆ ಎಂದು ತಿಳಿದು ಬಂದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ನೀಡಿರುವ ಸಾಲದ ಮೊತ್ತವನ್ನು ಬ್ಯಾಂಕ್ ಅಥವಾ ಸಹಕಾರ ಸಂಘದ ಬಡ್ಡಿಯೊಂದಿಗೆ ಕೂಡಲೇ ವಾಪಸ್ಸು ಪಡೆಯಲಾಗುತ್ತದೆ ಮತ್ತು ಅಂತಹ ವಿದ್ಯಾರ್ಥಿಗಳ ಮತ್ತು ಪೋಷಕರ ಹೆಸರು ಮತ್ತು ಫೋಟೊವನ್ನು ಮಹಾಸಭೆಯ ವಾರ್ತಾಪತ್ರದಲ್ಲಿ ಪ್ರಕಟಿಸಲಾಗುತ್ತದೆ.

ಒಬ್ಬ ವಿದ್ಯಾರ್ಥಿಯು ಮಹಾಸಭೆಯಿಂದ ಒಂದು ರೀತಿಯ ಅನುಕೂಲವನ್ನು ಪಡೆದುಕೊಳ್ಳಲು ಅವಕಾಶವನ್ನು ಮಾಡಿಕೊಡಲಾಗಿದೆ.
ಅವುಗಳೆಂದರೆ ಲ್ಯಾಪ್‌ಟಾಪ್/ ವಿದ್ಯಾರ್ಥಿಮಿತ್ರ ಸಾಲ ಯೋಜನೆ/ ಹಾಸ್ಟೆಲ್‌ನಲ್ಲಿ ಉಚಿತ ಸೀಟ್.

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152